# ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ – ದೀಪ ಪ್ರದಾನ

ದಿನಾಂಕ:11–03–2015



ಮಾನವನ ವ್ಯಕ್ತಿತ್ವ ನಿರ್ಮಾಣ ಉತ್ತಮ ನಡೆ ಮತ್ತು ನುಡಿಯಿಂದ ಸಾಧ್ಯ. ಬಿರುಗಾಳಿಯು ವ್ಯಕ್ತಿತ್ವ ನಾಶಕ್ಕೆ ಕಾರಣವಾದರೆ ತಂಗಾಳಿಯು ಮಾನವನಿಗೆ ತಂಪನ್ನು ನೀಡುತ್ತದೆ. ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಸಮಾಜ ನಿರ್ಮಾಣ ಮಾಡುವ, ಸಮಾಜಕ್ಕೆ ಕೊಡುಗೆಯಾಗುವ ತಂಗಾಳಿಯ ರೂಪದಲ್ಲಿ ಉತ್ತಮ ನಡೆ ನುಡಿಗಳನ್ನು ಅಳವಡಿಸಿಕೊಳ್ಳಬೇಕು. ಇಂತಹ ಭಾರತೀಯ ಮೌಲ್ಯಗಳನ್ನೊಳಗೊಂಡ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ದೊರೆತಿರುವುದು ಶ್ರೇಯಸ್ಕರ. ಸುಂದರ ಜೀವನ ಮೌಲ್ಯಗಳ ದಿಕ್ಸೂಚಿಯನ್ನು ಮುಂದಿಟ್ಟುಕೊಂಡು ಮುನ್ನಡೆದರೆ ಜೀವನ ಅರ್ಥಪೂರ್ಣವಾಗುವುದರಲ್ಲಿ ಸಂದೇಹವಿಲ್ಲ ಎಂದು ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲ ಮಲ್ಲಿಕಾರ್ಜುನ ಸ್ವಾಮೀಜಿಯವರು ಶ್ರೀರಾಮ ಪ್ರೌಢಶಾಲೆಯಲಿ ನಡೆದ ದೀಪಪ್ರದಾನ ಕಾರ್ಯಕ್ರಮದಲಿ ವಿದ್ಯಾರ್ಥಿಗಳಿಗೆ ಆಶೀರ್ವಚನ ನೀಡಿದರು.



ಭಾರತೀಯ ಶಿಕ್ಷಣದಿಂದ ವಿದ್ಯಾರ್ಥಿಗಳು ಸಮಾಜದ ಬೆಳಕಾಗಿ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಸಾಧ್ಯ. ಸಮಾಜದಲ್ಲಿ ಮುನ್ನಡೆಯುವಾಗ ಯಾವುದೇ ರೀತಿಯ ವಿಕೃತಿಗಳಿಗೆ ಒಳಗಾಗದೇ ಭಾರತೀಯ ಶಿಕ್ಷಣವನ್ನು ಹೃದಯದಲ್ಲಿ ಸದಾ ಜಾಗೃತ ಸ್ಥಿತಿಯಲ್ಲಿಟ್ಟುಕೊಂಡು ಮುನ್ನಡೆಯುವುದರೊಂದಿಗೆ ಸಾಮಾಜಿಕ ಪರಿವರ್ತನೆಯ ಪ್ರವರ್ತಕರಾಗಬೇಕೆಂದು ಶ್ರೀರಾಮ ವಿದ್ಯಾಕೇಂದ್ರ ಸಂಚಾಲಕರು ಡಾ| ಪ್ರಭಾಕರ ಭಟ್ ಕಲ್ಲಡ್ಕ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ ವಹಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ವೀರೇಶ್ ಉದ್ಯಮಿಗಳು ಬೆಂಗಳೂರು, ಶ್ರೀ ಜನಾರ್ದನ ಉದ್ಯಮಿಗಳು ಮೈಸೂರು, ಶ್ರೀಮತಿ ರಶ್ಮಿ ರಂಗಮೂರ್ತಿ, ಎಸ್.ಎಂ.ಬಡಸ್ಕರ್ ಹಿರಿಯ ನ್ಯಾಯವಾದಿಗಳು, ನಾಗರಾಜ್ ಆರಕ್ಷಕರು ಹುಬ್ಬಳ್ಳಿ, ದೇವಿಪ್ರಸಾದ್ ಮೈಸೂರು, ಶ್ರೀಮತಿ ಡಾ|ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದರು.





10ನೇ ತರಗತಿ ವಿದ್ಯಾರ್ಥಿಗಳು ಬಿಳಿ ಪಂಚೆ ಮತ್ತು ಬಿಳಿ ಅಂಗಿಯೊಂದಿಗೆ, ಹಾಗೂ ವಿದ್ಯಾರ್ಥಿನಿಯರು ಸೀರೆಯುಟ್ಟು ದೀಪಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅತಿಥಿಗಳು ವಿದ್ಯಾರ್ಥಿಗಳಿಗೆ ತಿಲಕವಿಟ್ಟು ಆಶೀರ್ವದಿಸಿದರು.

ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಶ್ರೀ ವಸಂತ ಮಾಧವ ಸ್ವಾಗತಿಸಿದರು. 8ನೇ ತರಗತಿಯ ಗೌತಮ್ ವಂದಿಸಿ, 9ನೇ ತರಗತಿಯ ಶ್ರೇಯ ಕಾರ್ಯಕ್ರಮ ನಿರೂಪಿಸಿದರು.